ಪಿ.ಸಿ. ನಂಬರ್: **230/2026**
ಸಿ.ಡಬ್ಲ್ಯು: **1**

ಪ್ರಧಾನ ದಿವಾಣಿ ಹಾಗೂ ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ ಇವರ ನ್ಯಾಯಾಲಯದಲ್ಲಿ,

ಧಾರವಾಡ

ಪಿ.ಸಿ. ನಂಬರ್: **230/2026**

| | |
|---|---|
| ಸಾಕ್ಷಿಯ ಹೆಸರು | : ಅಶೋಕ |
| ತಂದೆಯ ಹೆಸರು | : ಶಿವಾಜಿ ಬಿಬಾಟೆ |
| ವಯಸ್ಸು | : 65 ವರ್ಷ |
| ಉದ್ಯೋಗ | : ನಿವೃತ್ತ ಬ್ಯಾಂಕ್ ನೌಕರರು. |
| ವಾಸಸ್ಥಳ | : ಬನಶ್ರೀ ನಗರ, ಧಾರವಾಡ |

ದಿ: **15-04-2026** ರಂದು ಸಾಕ್ಷಿಯನ್ನು ಕರೆಯಿಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋದಿಸಲಾಯಿತು.

ಸಾಕ್ಷಿಯ ಪ್ರತಿಜ್ಞಾ ಪೂರ್ವಕ ಹೇಳಿಕೆ ಕಲಂ.223 ಬಿ ಎನ್ ಎಸ್ ಎಸ್ ಅಡಿಯಲ್ಲಿ

1. ಆರೋಪಿಯು ನಾನು ಧಾರವಾಡದಲ್ಲಿರುವ ಎಸ್ ಬಿ ಐ ಬ್ಯಾಂಕ್ ನ ಮುಖ್ಯ ಶಾಖೆಯಲ್ಲಿ ಕರ್ತವ್ಯ ಮಾಡುತ್ತಿದ್ದಾಗ ಪರಿಚಯವಾಗಿರುತ್ತಾನೆ. ಆರೋಪಿತನು ಸರ್ಕಾರಿ ಪರವಾನಿಗೆ ಹೊಂದಿರುವ ಕೆ ಎಸ್ ಎಸ್ ಐ ಡಿ ಸಿ ಪಿ ಡಬಲ್ಯೂ ಡಿ ಅದರಲ್ಲಿ ಕಾಂಟ್ರ್ಯಾಕ್ಟ ಕೆಲಸ ಮಾಡುತ್ತಿದ್ದ. ಮೇ 30 ರ 2020 ರಲ್ಲಿ ನಾನು ನಿವೃತ್ತಿ ಹೊಂದಿರುತ್ತೇನೆ. ನನಗೆ ನಿವೃತ್ತಿ ಭತ್ಯೆಯ ಹಣ ಬಂದಿತ್ತು.

2. ಆರೋಪಿತನು ಆತನಿಗೆ ಹಣ ಬೇಕು ಎಂದು ಹೇಳಿ ನನ್ನ ಹತ್ತಿರ ಬಂದು ಭೇಟಿ ಆಗುತ್ತಿದ್ದನು. ಆರೋಪಿತನು ನನಗೆ ರೂ.15,00,000/- ಹಣ ಕೇಳಿದ್ದ ಅದರಲ್ಲಿ ನಾನು ರೂ.1,00,000/- ಹಣ ಖಾತೆಯ ಮುಖಾಂತರ ಜಮಾ ಮಾಡಿದ್ದೆ ಹಾಗೂ ರೂ.4,00,000/- ಹಣವನ್ನು ನಗದು ರೂಪದಲ್ಲಿ ಕೊಟ್ಟಿದ್ದೆ. ದಿ:24-08-2020 ರಲ್ಲಿ

ರೂ.1,00,000/- ಹಣ ಆರೋಪಿತನ ಖಾತೆಗೆ ಹಾಗೂ ನಗದು ರೂಪದಲ್ಲಿ ರೂ.4,00,000/- ಹಣ ಆರೋಪಿತನಿಗೆ ನೀಡಿದ್ದೆ. ದಿಃ27-08-2020 ರಂದು ರೂ.1,00,000/- ಹಣ ಆರೋಪಿತನ ಖಾತೆಗೆ ಹಾಗೂ ನಗದು ರೂಪದಲ್ಲಿ ರೂ.4,00,000/- ಹಣ ಆರೋಪಿತನಿಗೆ ನೀಡಿದ್ದೆ. ಒಟ್ಟು ಆರೋಪಿತನಿಗೆ ನಾನು ರೂ.15,00,000/- ಹಣವನ್ನು ನೀಡಿರುತ್ತೇನೆ. ಆರೋಪಿತನು ನನ್ನ ಹತ್ತಿರ ಹಣವನ್ನು ಕೆ ಎಸ್ ಎಸ್ ಐ ಡಿ ಸಿ ಕಟ್ಟಡವನ್ನು ನವೀಕರಣಗೊಳಿಸಲು ಹಾಗೂ ಅದಕ್ಕೆ ಬೇಕಾಗುವ ಸಾಮಗ್ರಿಗಳಿಗಾಗಿ ಹಾಗೂ ರೇಣುಕಾ ನಗರದಲ್ಲಿರುವ ಎರಡು ಸರಕಾರಿಯ ಆಸ್ತಿಗೆ ಸ್ವಚ್ಛತೆ ಮಾಡಲು ಫೆಂಚಿಂಗ್ ಹಾಕಲು ಹಾಗೂ ಬೋರ್ಡ ಹಾಕಲು ನನ್ನ ಕಡೆಯಿಂದ ಹಣವನ್ನು ತೆಗೆದುಕೊಂಡಿದ್ದ. ಆರೋಪಿತನು ಕೆಲಸ ಮಾಡುತ್ತಾನೆ ಎಂದು ನಂಬಿಕೆ ಆಧಾರದ ಮೇಲೆ ಆತನಿಗೆ ಹಣವನ್ನು ಕೊಟ್ಟಿದ್ದೆನು.

3. ಆರೋಪಿತನು 15 ರಿಂದ 20 ದಿನಗಳ ಒಳಗೆ ಹಣವನ್ನು ಕೊಡುತ್ತೇನೆ ಎಂದು ಹೇಳಿ ನನಗೆ ಹಣವನ್ನು ಹಿಂದಿರುಗಿಸಿರುವುದಿಲ್ಲ. ನನಗೆ ಆರೋಪಿತನು ಆರು ತಿಂಗಳವರೆಗೆ ಹಣ ಕೇಳಬೇಡ, ನನಗೆ ಸರಕಾರದಿಂದ ಹಣ ಬಂದಿಲ್ಲ, ಆರು ತಿಂಗಳ ನಂತರ ಬರಲು ಹೇಳಿದ್ದರಿಂದ ಆರು ತಿಂಗಳು ಬಿಟ್ಟು ಆತನಿಗೆ ಹಣ ಕೇಳಿದೆನು. ಆದರೆ ಆರೋಪಿಯು ನನಗೆ ಹಣವನ್ನು ಕೊಟ್ಟಿರುವುದಿಲ್ಲ ಮತ್ತು ಆರೋಪಿತನು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ. ಹಾಗೂ ನನಗೆ ಜೀವ ಬೆದರಿಕೆ ಹಾಕಿರುತ್ತಾನೆ. ನನಗೆ ರೌಡಿಸಂ ಮಾಡಿರುತ್ತಾನೆ. ನಾನು ಉಪನಗರ ಪೋಲಿಸ್ ಠಾಣೆ ಧಾರವಾಡಕ್ಕೆ ದೂರನ್ನು ದಿಃ22-02-2022 ರಂದು ನೀಡಿರುತ್ತೇನೆ ಹಾಗೂ ಡಿ ಜಿ ಮತ್ತು ಐ ಜಿ ಯವರಿಗೂ ಸಹ ದಿಃ31-05-2024 ರಂದು ದೂರನ್ನು ನೀಡಿರುತ್ತೇನೆ. ಪೋಲಿಸರು ನ್ಯಾಯಾಲಯದಲ್ಲಿ ಬಗೆ ಹರಿಸಿಕೊಳ್ಳಿ ಎಂದು ಹೇಳಿ ಹಿಂಬರಹ ಕೊಟ್ಟಿರುತ್ತಾರೆ. ಹಾಗಾಗಿ ಈ ದೂರನ್ನು ಸಲ್ಲಿಸಿರುತ್ತೇನೆ. ಆರೋಪಿಯು ನನಗೆ ಮೋಸ ಮಾಡಿರುತ್ತಾನೆ, ಹಾಗಾಗಿ ಆತನ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಕೇಳಿಕೊಳ್ಳುತ್ತೇನೆ.

ಪಿ.ಸಿ. ನಂಬರ್: **230/2026**
ಸಿ.ಡಬ್ಲ್ಯೂ: **1**

ಮುಂದುವರೆದ ಹೇಳಿಕೆಗಾಗಿ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)**

ಓ. ಹೇ. ಕೆ. ಸರಿ ಇದೆ.

ನನ್ನ ಸಮಕ್ಷಮ

ಪ್ರಧಾನ ದಿವಾಣಿ ನ್ಯಾಯಾಧೀಶರು
ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ.